(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಎಲ್ಲಾ ವ್ಯಾಪಾರಸ್ಥರು, ರೈತರು ಕೂಗುತ್ತಿದ್ದಾರೆ, ಸರ್ಕಾರ ಕಣ್ಮುಚ್ಚಿಕೊಂಡು ಕುಳಿತಿದೆ.

ಉಪಾಧ್ಯಕ್ಷಣಿಯವರು:- ನೀವು ಯಾವ ಸಬ್ಜೆಕ್ಟ್ ಮೇಲೂ ಮಾತನಾಡುತ್ತಿಲ್ಲ. ಇರಿಗೇಷನ್‌ನಿಂದ ಇನ್ನೆಲ್ಲಿಗೊ ಹೋದಿರಿ. ಬೇಡಿಕೆಗಳು ಬಂದಾಗ ತಾವು ಏನು ಬೇಕಾದರೂ ಪ್ರಸ್ತಾಪ ಮಾಡಿ. ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು, ನಾಳೆ, ನಾಡಿದ್ದು ಎಲ್ಲಾ ಇದೆ. ಆಗ ತಾವು ಏನು ಬೇಕಾದರೂ ಮಾತನಾಡಬಹುದು. ಈ ರೀತಿ ನೀವು ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ. ಎಸ್. ಆಚಾರ್:- ಮಾನ್ಯ ಉಪಾಧ್ಯಕ್ಷಣಿಯವರೆ:-

ಅ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ನೇರಳೇಕಟ್ಟೆ ರಸ್ತೆಗೆ ಡಾಂಬರೀಕರಣಗೊಳಿಸುವ ಬಗ್ಗೆ,

ಆ) ಉಪ್ಪಿನ ಕುದುರು ಗ್ರಾಮಕ್ಕೆ ಪ್ರೌಢ ಶಾಲೆಯನ್ನು ಮಂಜೂರ್ಮಾಡುವ ಬಗ್ಗೆ,

ಇ) ಶಿರೂರಿನಲ್ಲಿ ಚಿಕ್ಕ ಬಂದರು ಮತ್ತು ಮಂಜುಗಡ್ಡೆ ಕಾರ್ಖಾನೆ ಸ್ಥಾಪನೆ ಬಗ್ಗೆ,

ಈ) ಗ್ರಾಮ ಲೆಕ್ಕಿಗರ ಸ್ವಾಧೀನದಲ್ಲಿರುವ ಆರ್. ಟಿ. ಸಿ. ಪುಸ್ತಕಗಳನ್ನು ತಹಶೀಲ್ದಾರರ ವಶಕ್ಕೆ ಕೊಡುವ ಬಗ್ಗೆ,

ಉ) ಹೇರೂರು ರಸ್ತೆಯು ಅಪೂರ್ಣವಾಗಿದ್ದು ಅದನ್ನು ಪೂರ್ಣಗೊಳಿಸುವ ಬಗ್ಗೆ.

ಉಪಾಧ್ಯಕ್ಷಣಿಯವರು:- ಅರ್ಜಿಗಳನ್ನು ಒಪ್ಪಿಸಲಾಯಿತು.

(ಮಾನ್ಯ ಸದಸ್ಯರಾದ ಈಶ್ವರಪ್ಪನವರು ಮಾತನಾಡುತ್ತಿದ್ದರು.)

ಉಪಾಧ್ಯಕ್ಷಣಿಯವರು:- ತಾವು ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. I have called him and he has presented the petitions. ಈಗ ಒಳನೇ ನಿಯಮದ ಮೇರೆಗೆ ಬರುವ ವಿಷಯಗಳು. ಶ್ರೀಯುತ ಇಸಾಮಿಯ ಅವರು.

ಶ್ರೀ ಡಿ. ಬಿ. ಗಂಗಪ್ಪ:- ಪ್ರತಿಯೊಬ್ಬ ರೈತರೂ ೩೦೦ರಿಂದ ೫೦೦ ಎಕರೆವರೆಗೆ ಶೇಂಗಾ ಬೆಳೆದುಕೊಂಡು ಬಹಳ ಸಂತೋಷದಿಂದ ಇದ್ದಾರೆ. ರೈತರಿಗೆ ಕಷ್ಟ ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಈಶ್ವರಪ್ಪನವರೇ, ಏನಾದರೂ ನೀವು ಮಾತನಾಡಬೇಕಾದರೆ ಯಾವ ವಿಷಯದಲ್ಲಿ ತಾವು ಮಾತನಾಡುತ್ತೀರಿ ಎಂಬುದನ್ನು ನನಗೆ ತಿಳಿಸಿ ಮಾತನಾಡಬೇಕು. ಎಲ್ಲಾ ವಿಷಯ ತೆಗೆದುಕೊಂಡು ಮಾತನಾಡುವುದಾದರೆ ಇಲ್ಲಿ ಸಭೆ ನಡೆಸುವುದಕ್ಕಾಗುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಡಿಮ್ಯಾಂಡ್ಸ್ ಮೇಲೆ ಮಾತನಾಡುತ್ತೇನೆ ಎಂದರೆ ಖಂಡಿತ